॥ ಶ್ರೀ ಗಾಯತ್ರೀ ಮಾತಾ ಪ್ರಸಿದತು ॥





## 25ನೇ ವಾರ್ಷಿಕ ಶ್ರೀ ಗಾಯತ್ರೀ ಪ್ರತಿಷ್ಠಾಪನಾ

# ರಜತ ಮಹೋತ್ಸವದ ಮನವಿ

# 2025



Book-Post

ಇವರಿಗೆ,
ಶ್ರೀಮತಿ/ಶ್ರೀ ______________________

______________________

______________________


**ಶ್ರೀ ಗಾಯತ್ರೀ ತಪೋಭೂಮಿ ಚಾರಿಟೇಬಲ್ ಟ್ರಸ್ಟ್ (ರಿ).**

ಗಾಯತ್ರೀ ನಗರ, ಮುತ್ತಳ್ಳಿ, ತಡಸ-581 212 ತಾ:ಶಿಗ್ಗಾಂವ - ಜಿಲ್ಲಾ:ಹಾವೇರಿ

ಆತ್ಮೀಯ ಭಕ್ತರೇ,

ಶ್ರೀಮತ್ಪರಮಹಂಸೇತ್ಯಾದಿ ಸಮಸ್ತ ಬಿರುದಾವಳಿ ವಿರಾಜಮಾನರಾದ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠಾಧೀಶ್ವರಾದ ಪರಮ ಪೂಜ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹದಿಂದ ಹಾಗೂ ತತ್ಕರಕಮಲಸಂಜಾತರಾದ ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳವರು ನಮ್ಮ ಶ್ರದ್ಧಾ-ಭಕ್ತಿಯನ್ನು ಅಂಗೀಕರಿಸಿ ನಮ್ಮ ಶ್ರೀ ಗಾಯತ್ರೀ ತಪೋಭೂಮಿಯ ರಜತ ಮಹೋತ್ಸವಕ್ಕೆ ಅನುಗ್ರಹಿಸಿದ್ದಾರೆ.

ಧಿಯೋ ಯೊ ನಃ ಪ್ರಚೋದಯಾತ್ - ಬುದ್ದಿಯ ಕತ್ತಲನ್ನು ಕಳೆಯುವ ಶ್ರೀ ಗಾಯತ್ರೀ ಮಹಾಮಂತ್ರ ನಾಲ್ಕು ವೇದಗಳ ಸಾರವಾಗಿದ್ದು ಸೃಷ್ಟಿಯೆನ್ನುವ ಶಕ್ತಿಯ ಉತ್ಪತ್ತಿಗೆ ಕಾರಣ ಎಂಬುದಾಗಿ ಈ ಮಹಾಮಂತ್ರದ ಮಹಿಮೆಯನ್ನು ಬಣ್ಣಿಸಲಾಗಿದೆ. ಶ್ರೀಕೃಷ್ಣ ಪರಮಾತ್ಮನೂ ಗಾಯತ್ರೀ ಛಂದಸಾ ಮಹಂ ಎಂದು ಇದರ ಮಹಿಮೆಯನ್ನು ಶ್ರೀಮದ್ಭಗವದ್ಗೀತೆಯಲ್ಲಿ ತಿಳಿಯಪಡಿಸಿದ್ದಾನೆ. ನಮ್ಮ ಗುರುಗಳಾದ ಪ. ಪೂ. ಶ್ರೀ ಬಾಲಕೃಷ್ಣಾನಂದ ಸರಸ್ವತಿ ಗುರುಮಹಾರಾಜರ (ಪ. ಪೂ. ಶ್ರೀ ವಲ್ಲಭ ಚೈತನ್ಯ ಗುರುಗಳು) ಜೀವನದ ಉದ್ದೇಶವೇ ಶ್ರೀ ಗಾಯತ್ರೀ ಮಹಾಮಂತ್ರದ ಬೋಧನೆ, ಶ್ರೀ ಗಾಯತ್ರೀ ಮಾತೆಯ ಆರಾಧನೆ ಹಾಗೂ ಈ ಮಂತ್ರದ ಸಾಕ್ಷಾತ್ಕಾರ ಮಾಡಿಕೊಳ್ಳುವುದಾಗಿತ್ತು. ಶ್ರೀ ಗಾಯತ್ರೀ ಮಾತೆಯ ಅನುಗ್ರಹಕ್ಕೆ ಪಾತ್ರರಾಗಿದ್ದ ಶ್ರೀ ಗುರುಗಳು ಶ್ರೀ ಕೃಷ್ಣೇಂದ್ರ ಮಹಾಸ್ವಾಮಿಗಳ ಸ್ವಪ್ನಾದೇಶ ಹಾಗೂ ಪ್ರತ್ಯಕ್ಷ ಗುರುಗಳಾಗಿದ್ದ ಶ್ರೀ ಕಾಶೀಬಸವರಾಜ ಗುರುಗಳ ಆದೇಶದಂತೆ ಶ್ರೀಕ್ಷೇತ್ರ ಗಾಯತ್ರೀ ತಪೋಭೂಮಿ ತಡಸದಲ್ಲಿ ಶ್ರೀ ಗಾಯತ್ರೀ ಮಾತೆಯ ಸುಂದರವಾದ ಮೂರ್ತಿಯನ್ನು ಸ್ಥಾಪಿಸಿದ್ದಲ್ಲದೆ ದಕ್ಷಿಣ ಭಾರದಲ್ಲಿಯೇ ಒಂದು ಪ್ರಸಿದ್ಧ ಯಾತ್ರಾಕ್ಷೇತ್ರವನ್ನಗಿ ಮಾಡಿದರು.

ಶ್ರೀ ಗಾಯತ್ರೀ ಮಂತ್ರದ ಸಾಧನೆಯಿಂದ ಸಾಮಾನ್ಯ ಜನತೆಯ ಆತ್ಮೋದ್ಧಾರಕ್ಕೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಭಾರತ ದೇಶಾದ್ಯಂತ 23 ಪ್ರದೇಶಗಳಲ್ಲಿ ಶ್ರೀ ಗಾಯತ್ರೀ ಕೋಟಿ ಜಪ ಹಾಗೂ ಸಾಂಗತಾ ಕಾರ್ಯಗಳನ್ನು ಶ್ರೀಗುರುಗಳು ಯಶಸ್ವಿಯಾಗಿ ಸಂಪನ್ನಗೊಳಿಸಿದ್ದು ನಿಮಗೆಲ್ಲ ತಿಳಿದ ಸಂಗತಿಯಾಗಿದೆ. ಈ ಎಲ್ಲ ಮಹಾಯಜ್ಞಗಳ ಉದ್ದೇಶ ಲೋಕ-ಕಲ್ಯಾಣಾರ್ಥವಾಗಿದ್ದು ಮತ್ತು ಜನಸಾಮಾನ್ಯರಿಗೆ ಸುಖ ಶಾಂತಿ ನೆಮ್ಮದಿಯ ಜೀವನ ಪರಸ್ಪರ ಸಾಮರಸ್ಯದಿಂದ ಅಭಿವೃದ್ಧಿ ಉಂಟುಮಾಡುವುದು ಎಂದು ಬೇರೆ ಹೇಳಬೇಕಾಗಿಲ್ಲ.

ಶ್ರೀ ಗುರುಗಳ ಸಂಕಲ್ಪದಂತೆ 24ನೆಯ ಕೋಟಿ ಗಾಯತ್ರೀ ಜಪ ಹಾಗೂ ಮಹಾಯಜ್ಞದ ಸಾಂಗತಾ ಕಾರ್ಯಕ್ರಮವನ್ನು ಶ್ರೀ ಗಾಯತ್ರೀ ತಪೋಭೂಮಿ

ತಡಸದಲ್ಲಿ 22 ಜನೇವರಿ ರಿಂದ 29 ಜನೇವರಿ 2018ರ ವರೆಗೆ ನಿಮ್ಮೆಲ್ಲರ ಸಹಕಾರದಿಂದ ಸಂಪೂರ್ಣಗೊಂಡಿತು. 2018 ರಿಂದ ಈವರೆಗೂ ಅಭಿವೃದ್ಧಿ ಹಾಗೂ ಧರ್ಮದ ಕಾರ್ಯಗಳು ಯಶಸ್ವಿಯಾಗಿ ನಡೆಯುತ್ತಾ ಬಂದಿದೆ.

ದಿನಾಂಕ 21-02-2024 ರಂದು ಎಲ್ಲ ಭಕ್ತಾದಿಗಳ ಮಹಾ ಸಭೆಯನ್ನು ಕರೆಯಲಾಗಿ ಶ್ರೀ ಪ್ರಣವಾನಂದ ಗುರುಗಳ ಸನ್ನಿಧಾನದಲ್ಲಿ ಭಕ್ತಾದಿಗಳು 25ನೇ ಶ್ರೀ ಗಾಯತ್ರೀ ರಜತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸರ್ವಾನುಮತದಿಂದ ನಿರ್ಣಯಿಸಲಾಗಿದೆ.

**ಫೆಬ್ರುವರಿ 2025** ಗಾಯತ್ರೀ ಮಾತೆಯ ಮೂರ್ತಿ ಪ್ರತಿಷ್ಠಾಪನೆಯಾಗಿ 25 ವರ್ಷಗಳು ಆಗುತ್ತದೆ ತನ್ನಿಮಿತ್ತ ರಜತ ಮಹೋತ್ಸವ ಆಚರಿಸಲು ಸಂಕಲ್ಪಿಸಲಾಗಿದೆ. **ರಜತ ಮಹೋತ್ಸವ** ನಿಮಿತ್ತ ಧರ್ಮಧ್ವಜಸ್ತಂಬ, ಶ್ರೀಚಕ್ರ ಸ್ಥಾಪನೆ, ನವಗ್ರಹ, ದಕ್ಷಿಣಾಮೂರ್ತಿ ಪ್ರತಿಷ್ಠಾಪನೆ ಮತ್ತು ಗಾಯತ್ರೀ ದೇವಿಗೆ ಕುಂಭಾಭಿಷೇಕ, ಶ್ರೀ ಗುರು ಚರಿತ್ರೆ ಪಾರಾಯಣ (108), ಮಹಾರುದ್ರ ಯಾಗ, ಗಾಯತ್ರೀ ಹವನ, ಚಂಡಿ ಹೋಮ ಹಾಗೂ ಇನ್ನು ಅನೇಕ ಲೋಕ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಮೇಲಿನ ಹಿನ್ನಲೆಯಲ್ಲಿ ಈ **ರಜತ ಮಹೋತ್ಸವ**ವನ್ನು ತನು, ಮನ, ಧನ ಸೇವೆಯಿಂದ ನೀವು ಹಾಗೂ ನಿಮ್ಮ ಸಂಬಂಧಿಕರು ಮತ್ತು ಸ್ನೇಹಿತರು ಪಾಲ್ಗೊಳ್ಳಬೇಕೆಂದು ಸದಸ್ಯರು ಹಾಗೂ ನಿರ್ದೇಶಕರ ಪರವಾಗಿ ನಿಮ್ಮಲ್ಲಿ ಸವಿನಯಪೂರ್ವಕ ಮನವಿ ಮಾಡುತ್ತಿದ್ದೇವೆ.

ಈ ಮಹಾಕಾರ್ಯಕ್ಕೆ ದೇಣಿಗೆಯಾಗಿ ನೀಡುವ ಭಕ್ತರು ನೇರವಾಗಿ ಈ ಕೆಳಗೆ ನಮೂದಿಸಿದ ಬ್ಯಾಂಕ ಖಾತೆ ಹಾಗೂ ಕ್ಯೂ ಆರ್ ಕೋಡ್‌ಗೆ ವರ್ಗಾಯಿಸಿ ನಮಗೆ ಮಾಹಿತಿಯನ್ನು ನೀಡಬೇಕೆಂದು ವಿನಂತಿಸಿಕೊಳ್ಳುತ್ತೇವೆ. ಶ್ರೀ ಕ್ಷೇತ್ರ ತಪೋಭೂಮಿ, ತಡಸ ಕಾರ್ಯಾಲಯದಲ್ಲಿಯೂ ಸಹಿತ ದೇಣಿಗೆ ನೀಡಿ ಪಾವತಿ ಪಡೆಯಬಹುದಾಗಿದೆ.

ವಂದನೆಗಳೊಂದಿಗೆ,

**ಧರ್ಮದರ್ಶಿಗಳು ಹಾಗೂ ಭಕ್ತವೃಂದ**

ಶ್ರೀ ಗಾಯತ್ರೀ ತಪೋಭೂಮಿ ಚಾರಿಟೇಬಲ್ ಟ್ರಸ್ಟ್ (ರಿ)
ಗಾಯತ್ರೀ ನಗರ, ತಡಸ, ಮುತ್ತಳ್ಳಿ.
ತಾ|| ಶಿಗ್ಗಾಂವ ಜಿ|| ಹಾವೇರಿ

# BANK DETAILS

Cheques to be drawn in favour of
**Sri Gayatri Tapobhoomi Charitable Trust (R)**

**BANK OF BARODA**
**Tadas Branch**
Tq. : Shiggaon Dist. : Haveri
Current Account Number
64450200001257
IFSC Code : BARBOVJTADA

**UNION BANK OF INDIA**
**Coen Road, Hubli Branch**
Current Account Number
510331001329958
IFSC Code : UBIN0900257

We humbly accept donations by Cheque and Online Payment only

## FOR MORE DETAILS CONTACT

| | | |
|---|---|---|
| **Sri Gayatri Tapobhoomi** | **Shri Raju Kulkarni**<br>**Shri Raghavendra Palankar**<br>**Shri Shyamsundar Tapas** | +91 9900559361<br>+91 9632637224<br>+91 9739053205 |
| **Dharwad** | **Shri Sudhir Desai**<br>**Shri Subhash Akalwadi** | +91 9449028337<br>+91 9448822711 |
| **Bijapur** | **Shri Raju Padaki** | +91 9945517714<br>+91 9591105183 |
| **Bangalore** | +91 9341262039, 9741437904, 9901067806<br>+91 9900005727, 9845641897, 9740811088 | |
| **Pune** | **Shri Gururaj Kulkarni**<br>**Shri Mahesh K Chitnis**<br>**Shri Prashant Harare** | +91 8087029844<br>+91 9011024971<br>+91 8180003613 |
| **Surat** | **Shri Ajit Baji** | +91 9998011314 |
| **Mumbai** | **Shri Vadiraj Dambal** | +91 9004800389 |
| **Belgaum** | **Shri N C Ail**<br>**Shri Arun Kumar** | +91 9341108612<br>+91 7760955232 |
| **Hubli** | **Shri Govind Joshi**<br>**Shri Sadguru Desai**<br>**Shri Madhava Padoshi**<br>**Smt. Hema Desai** | +91 9343979507<br>+91 8883300046<br>+91 9036057527<br>+91 9739235414 |
| **Ilakal** | **Shri T. H. Kulkarni** | +91 9449830789 |
| **Indi** | **Shri Sunil Kulkarni** | +91 9036550315 |
| **Karwar** | **Shri Pandurang Naik**<br>**Shri R. G. Prabhu**<br>**Shri Madhav Naik** | +91 9448125542<br>+91 9448438508<br>+91 9448133799 |

**Shri Gayatri Tapobhoomi Charitable Trust (R)**
Gayatri Tapobhoomi, Gayatri Nagar, Muttalli, Tadas - 581 212
Tq. Shiggaon, Dist. Haveri E-mail : gayatritapobhoomi@gmail.com